compose.kerala.gov.in
egazette.kerala.gov.in
printing.kerala.gov.in

Regn.No. KERBIL/2012/45073
dated 2012-09-05 with RNI
Reg No.KL/TV(N)/634/2021-2023

കേരള സർക്കാർ
GOVERNMENT OF KERALA

# കേരള ഗസറ്റ്
# KERALA GAZETTE

ആധികാരികമായി പ്രസിദ്ധപ്പെടുത്തുന്നത്
PUBLISHED BY AUTHORITY

ചൊവ്വ, 2026 ഫെബ്രുവരി 17
**Tuesday, 17th February 2026**

1201 കുംഭം 5
**5th Kumbham 1201**

1947 മാഘം 28
**28th Magha 1947**

വാല്യം 15
**Vol. XV**

നമ്പർ / **No.** 7

## Part I -Section (iii)

## Law Department

©
കേരള സർക്കാർ
GOVERNMENT OF KERALA
2026

This is a digitally signed Gazette.
Authenticity may be verified through https://compose.kerala.gov.in/

**ಕೇರಳ ಸರಕಾರ**

ಕಾನೂನು (ಶಾಸನ ರಚನೆ-ಜಿ) ಇಲಾಖೆ

ಅಧಿಸೂಚನೆ

ನಂಬ್ರ 37/ಲೆಗ್. ಜಿ2/2025/ಕಾನೂನು. ತಿರುವನಂತಪುರಂ, *2025 ನವೆಂಬರ್ 13, 1201 ತುಲಾ 27/ 1947 ಕಾರ್ತಿಕ 22.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2025 ನವೆಂಬರ್ 11ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಕೆ. ಜಿ. ಸನಲ್ ಕುಮಾರ್,**
*ಕಾನೂನು ಕಾರ್ಯದರ್ಶಿ.*

2025ರ 16ನೇ ಅಧಿನಿಯಮ

## 2025ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ತಿದ್ದುಪಡಿ ಅಧಿನಿಯಮ

2015ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ಅಧಿನಿಯಮವನ್ನು ತಿದ್ದುಪಡಿ ಮಾಡುವುದಕ್ಕಿರುವ

ಒಂದು
ಅಧಿನಿಯಮ

ಪೀಠಿಕೆ.—2015ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ಅಧಿನಿಯಮ (2015ರ 18)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಂಕ್ಷಿಪ್ತನಾಮ ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2025ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ತಿದ್ದುಪಡಿ ಅಧಿನಿಯಮ ಎಂದು ಕರೆಯಬಹುದು.

(2) ಇದು 2025 ಆಗಸ್ಟ್ 14ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 2ನೇ ವಿಭಾಗದ ತಿದ್ದುಪಡಿ.—2015ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ಅಧಿನಿಯಮ (2015ರ 18) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 2ನೇ ವಿಭಾಗದ (ಎ) ಖಂಡದ (viii)ನೇ ಉಪಖಂಡವನ್ನು ಬಿಟ್ಟುಬಿಡತಕ್ಕದ್ದು.

G. 2/2026/GPC.

This is a digitally signed Gazette.
Authenticity may be verified through https://compose.kerala.gov.in/

3. 3ಎ, 3ಬಿ ಎಂಬೀ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 3ನೇ ವಿಭಾಗದ ನಂತರ ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"3ಎ. ಅಧಿನಿಯಮದ ಪ್ರಕಾರ ಅಧ್ಯಾಪಕೇತರ ಹುದ್ದೆಗಳಿಗೆ ನೇಮಿಸಲಾದ ಅಸ್ತಿತ್ವದಲ್ಲಿರುವ ನೌಕರರಿಗೆ ಸಂಬಂಧಿಸಿದ ವಿಶೇಷ ಉಪಬಂಧ.—ಈ ಅಧಿನಿಯಮದಲ್ಲಿ ಅಥವಾ ಯಾವುದಾದರೂ ನ್ಯಾಯಾಲಯದ ಅಥವಾ ಟ್ರಿಬ್ಯೂನಲಿನ ಅಥವಾ ಇತರ ಯಾವುದಾದರೂ ಪ್ರಾಧಿಕಾರದ ಯಾವುದಾದರೂ ತೀರ್ಪಿನಲ್ಲಿ ಅಥವಾ ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಸರಕಾರಕ್ಕೆ ಲೋಕ ಸೇವಾ ಆಯೋಗದೊಂದಿಗೆ ಸಮಾಯೋಚಿಸಿ, ಉನ್ನತ ಕಾನೂನು ಅಧ್ಯಯನಕ್ಕಿರುವ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ಹುದ್ದೆಗಳಲ್ಲಿ 2015ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ಅಧಿನಿಯಮ (2015ರ 18)ದ ಉಪಬಂಧಗಳ ಪ್ರಕಾರ ನೇರ ನೇಮಕಾತಿಯ ಮೂಲಕ ನೇಮಿಸಲಾದ ನೌಕರರನ್ನು, ನಿಗದಿಪಡಿಸಬಹುದಾದ ಅಂತಹ ಷರತ್ತುಗಳ ಮೇಲೆ ವಿಶ್ವವಿದ್ಯಾನಿಲಯಗಳಲ್ಲಿ ನೇಮಿಸಬಹುದಾಗಿದೆ.

3ಬಿ. ರದ್ದತಿ.—ಉನ್ನತ ಕಾನೂನು ಅಧ್ಯಯನಕ್ಕಿರುವ ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು 2015ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ಅಧಿನಿಯಮ (2015ರ 18)ದ ವ್ಯಾಪ್ತಿಯಿಂದ ಹೊರತುಪಡಿಸಿದ್ದರೂ ಪ್ರಸ್ತುತ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಪ್ರಸ್ತುತ ವಿಶ್ವವಿದ್ಯಾನಿಲಯವನ್ನು ಪ್ರಸ್ತುತ ಅಧಿನಿಯಮದ ವ್ಯಾಪ್ತಿಯಿಂದ ಹೊರತುಪಡಿಸಿದ ದಿನಾಂಕದವರೆಗೆ ಪ್ರಸ್ತುತ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಅನುಭವಿಸಿದ ಯಾವುದೇ ವಿಷಯದ ಸಿಂಧುತ್ವವನ್ನು ಅಥವಾ ಅಸಿಂಧುತ್ವವನ್ನು ಅಥವಾ ಪ್ರಭಾವವನ್ನು ಅಥವಾ ಪರಿಣಾಮವನ್ನು ಅಥವಾ ಇದುವರೆಗೆ ಗಳಿಸಿರುವ ಅಥವಾ ಪ್ರಾಪ್ತವಾಗಿಸಿರುವ ಅಥವಾ ಅನುಭವಿಸಿದಂತಹ ಯಾವುದಾದರೂ ಹಕ್ಕನ್ನು ಅಥವಾ ಯಜಮಾನತ್ವ ಹಕ್ಕನ್ನು, ಕರ್ತವ್ಯವನ್ನು ಅಥವಾ ಹೊಣೆಗಾರಿಕೆಯನ್ನು ಬಾಧಿಸುವುದಲ್ಲ."

4. ರದ್ದತಿ ಮತ್ತು ರಕ್ಷಣೆ.— (1) 2025ರ ಕೇರಳ ಲೋಕ ಸೇವಾ ಆಯೋಗ (ವಿಶ್ವವಿದ್ಯಾನಿಲಯಗಳ ಕೆಳಗಿನ ಸೇವೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಹೊಣೆಗಾರಿಕೆಗಳು) ತಿದ್ದುಪಡಿ ಅಧ್ಯಾದೇಶ (2025ರ 1) ಈ ಮೂಲಕ ರದ್ದುಗೊಂಡಿರುವುದು.

(2) ಈ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಕೆಳಗೆ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವನ್ನು ಈ ಅಧಿನಿಯಮದ ಕೆಳಗೆ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಕೆಳಗೆ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

**ಕೇರಳ ಸರಕಾರ**

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 1/ಲೆಗ್. ಎ2/2024/ಕಾನೂನು. ತಿರುವನಂತಪುರಂ, *2025* ಅಕ್ಟೋಬರ್ *28,* / *1201* ತುಲಾ *11*/ 1947 ಕಾರ್ತಿಕ 6.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2025 ಅಕ್ಟೋಬರ್ 25ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಕೆ. ಜಿ. ಸನಲ್ ಕುಮಾರ್,**
*ಕಾನೂನು ಕಾರ್ಯದರ್ಶಿ.*

2025ರ 7ನೇ ಅಧಿನಿಯಮ

## 2025ರ ಕೇರಳ ಸಾಮಾನ್ಯ ಮಾರಾಟ ತೆರಿಗೆ (ತಿದ್ದುಪಡಿ) ಅಧಿನಿಯಮ

1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮ (1963ರ 15)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2025ರ ಕೇರಳ ಸಾಮಾನ್ಯ ಮಾರಾಟ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 5ನೇ ವಿಭಾಗದ ತಿದ್ದುಪಡಿ.—5ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ವಿವರಣೆ (ಬ)ಯಲ್ಲಿನ "ವೈನ್" ಎಂಬ ಪದಗಳ ಮತ್ತು ಚಿಹ್ನೆಯ ನಂತರ "ಹೋರ್ಟ್ ವೈನ್" ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

G. 1/2026/GPC.

This is a digitally signed Gazette.
Authenticity may be verified through https://compose.kerala.gov.in/

2

3. ಅನುಸೂಚಿಯ ತಿದ್ದುಪಡಿ.—ಅನುಸೂಚಿಯಲ್ಲಿ,—

(ಎ) ಕ್ರಮ ಸಂಖ್ಯೆ 2ರಲ್ಲಿ, ''ವಿದೇಶ ಮದ್ಯ'' ಎಂಬ ಶೀರ್ಷಿಕೆಯ ಅಡಿಯಲ್ಲಿನ ಐಟಮ್ (iv)ರಲ್ಲಿ ''ವೈನ್'' ಎಂಬ ಪದದ ಮೊದಲು ''ಹೋರ್ಟ್ ವೈನ್ ಒಳಗೊಂಡಂತೆ'' ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬ) ವಿವರಣೆ (i)ರ ನಂತರ ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(iಎ) ''ಹೋರ್ಟ್ ವೈನಿಗೆ'' 2022ರ ಕೇರಳ ಸ್ಮಾಲ್ ಸ್ಕೇಲ್ ವೈನರಿ (ಫಾರ್ ಪ್ರೊಡಕ್ಷನ್ ಆಫ್ ಹೋರ್ಟ್ ವೈನ್ ಫ್ರಂ ಟ್ರಾಪಿಕಲ್ ಫ್ರೂಟ್ಸ್ ಆಂಡ್ ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಆಫ್ ಕೇರಳ) ನಿಯಮಗಳಲ್ಲಿನ ನಿಯಮ 2ರ ಖಂಡ (ಜಿ)ಯಲ್ಲಿ ನೀಡಿರುವ ಅದೇ ಅರ್ಥ ಇರುವುದಾಗಿದೆ.''.

PUBLISHED BY THE SUPERINTENDENT OF GOVERNMENT PRESSES
AT THE GOVERNMENT CENTRAL PRESS, THIRUVANANTHAPURAM, 2026

This is a digitally signed Gazette.
Authenticity may be verified through https://compose.kerala.gov.in/

Digitally signed by VEERAN T
Date:2026.02.17 03:14:10 +05:30